ದಿನಾಂಕಃ 08-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ- ಪ್ರತಿವಾದಿ ನಂ. 2 ರಿಂದ 4 ಪರ ಶ್ರೀ. ಕೆ ಎಸ್ ಜೆ ವಕೀಲರಿಂದ**

ನಾನು ಮತ್ತು ಪ್ರತಿವಾದಿಯರ ಕುಟುಂಬದವರು ಬಂಕಾಪುರ ಗ್ರಾಮದವರು ಎಂದರೆ ಸರಿ. ತಂಟೆದ ಆಸ್ತಿಯು ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಬಂಕಾಪುರದಲ್ಲಿ ಪ್ರತಿ ಎಕರೆಗೆ 40 ರಿಂದ 50 ಲಕ್ಷ ಮಾರುಕಟ್ಟೆ ಬೆಲೆ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ 6 ರಿಂದ 7 ಲಕ್ಷ ಇರುತ್ತದೆ ಎಂದು ಮುಂದುವರೆದು ನುಡಿಯುತ್ತಾರೆ. ಮೃತ ರವಿ ಇವರನ್ನು ನಾನು ನೋಡಿರುತ್ತೇನೆ. ರವಿ ಇತ ಅತೀಯಾದ ಮಧ್ಯ ಸೇವನೆ ಮಾಡುತ್ತಿದ್ದರು ಮತ್ತು ಯಾವಾಗಲೂ ನಿಶೆಯಲ್ಲಿಯೇ ಇರುತ್ತಿದ್ದರು ಎಂದರೆ ಸರಿಯಲ್ಲ. ಕಾಗದಪತ್ರಕ್ಕೆ ಸಹಿ ಪಡೆದುಕೊಳ್ಳುವಾಗ ರವಿ ಇವರ ಹೆಂಡತಿ ಇವರನ್ನು ಕರೆಯಿಸಿ ನನ್ನ ಸಮಕ್ಷಮ ಸಹಿ ಪಡೆದುಕೊಂಡಿಲ್ಲ. ವ್ಯವಹಾರ ಆಗುವಾಗ ಮೃತ ರವಿ, ನಿಜಗುಣಪ್ಪ, ರಮೇಶ ಹಾಗೂ ರವಿ ಇವರ ತಾಯಿ ಮತ್ತು ಉಳಿದ ಹೆಣ್ಣುಮಕ್ಕಳು ಇದ್ದರು. ಖರೀದಿ ಕರಾರುಪತ್ರಕ್ಕೆ ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ ಎಂದರೆ

ಸಾಕ್ಷಿ ಹಾಜರು ಇದ್ದ ಜನರ ಹೆಸರು ಮಾತ್ರ ಹೇಳುತ್ತೇನೆ ಎಂದು ನುಡಿಯುತ್ತಾರೆ. ಕರಾರುಪತ್ರಕ್ಕೆ ಅನುಕ್ರಮವಾಗಿ ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ಹೇಳಲು ಬರುವುದಿಲ್ಲ ಆದರೆ ಸಹಿ ಮಾಡಿದವರ ಹೆಸರು ಹೇಳುತ್ತೇನೆ. ಕರಾರುಪತ್ರಕ್ಕೆ ಮೃತ ರವಿ, ಅವರ ತಾಯಿ, ರವಿ ಇವರ ಸಹೋದರಿ, ನಿಜಗುಣಪ್ಪ ಮತ್ತು ರಮೇಶ ಇವರು ಸಹಿ ಮಾಡಿರುತ್ತಾರೆ. ವ್ಯವಹಾರವು ರವಿ ಇವರ ಮನೆಯಲ್ಲಿ ಆಗಿರುತ್ತದೆ. ವ್ಯವಹಾರವು ಆದ ತಾರೀಖು ಹೇಳಲು ಬರುವುದಿಲ್ಲ. ತಿಂಗಳು 10 ನೇ ತಿಂಗಳು, ವರ್ಷ 2019 ಆಗಿರುತ್ತದೆ. ವ್ಯವಹಾರ ಆಗುವಾಗ ರವಿ ಇವರ ಕುಟುಂಬದವರ ಹೊರತಾಗಿ ನಾನು, ನೀಲಪ್ಪ ನಿರುಳ್ಳಿ, ಮುನಿರಅಹ್ಮದ ಕರಜಗಿ ಇವರು ಇದ್ದೆವು. ಹಾಗೇ ಮಾತುಕತೆಯಾದ 2-3 ದಿವಸದ ನಂತರ ಬರವಣಿಗೆಯಲ್ಲಿ ಕರಾರುಪತ್ರ ಆಗಿರುತ್ತದೆ. ಹಣ ತೆಗೆದುಕೊಳ್ಳುವ ವ್ಯವಹಾರ ನನ್ನ ಸಮಕ್ಷಮ ಆಗಿರುತ್ತದೆ. ವಾದಿಯು ಮೃತ ರವಿ ಇವರಿಗೆ ನನ್ನ ಸಮಕ್ಷಮ 3 ಲಕ್ಷ ನೀಡಿರುತ್ತಾರೆ. ಹಣವನ್ನು ಚೆಕ್ ಮೂಲಕ ಕೊಟ್ಟಿರುತ್ತಾರೆ. ಚೆಕ್‌ನ ದಿನಾಂಕ ಹೇಳಲು ಬರುವುದಿಲ್ಲ. ಕರಾರುಪತ್ರವನ್ನು ಶಿಗ್ಗಾಂವ ಸಬ್ ರಜಿಸ್ಟ್ರಾರ್ ಕಚೇರಿಯಲ್ಲಿ

ಮಾಡಿಸಿರುತ್ತಾರೆ. ಸಂಚಗಾರ ಪತ್ರವನ್ನು 18.10.2019 ರಂದು ಮಾಡಿರುತ್ತಾರೆ. ಮೃತ ರವಿ ಇವರು ಮದ್ಯದ ಅಮಲಿನಲ್ಲಿ ಇರುವಾಗ ಅವರ ಹೆಂಡತಿಗೆ ಗೊತ್ತಾಗದಂತೆ ಸಂಚಗಾರ ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಮೃತ ರವಿಯ ಹೆಂಡತಿ ಮಕ್ಕಳು ಇವರ ಬಗ್ಗೆ ಏನು ವಿಚಾರಣೆ ಮಾಡದೇ ಸಂಚಗಾರ ಪತ್ರವನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆವಾಗ ಆಸ್ತಿಯ ಕಿಮ್ಮತ್ತು ಹೆಚ್ಚಿಗೆ ಇದ್ದರೂ ಸಹ ಬೇಕು ಅಂತಲೇ ಕಡಿಮೆ ಮಾರುಕಟ್ಟೆ ಬೆಲೆ ಕಾಣಿಸಿರುತ್ತೇವೆ ಎಂದರೆ ಸರಿಯಲ್ಲ.

ಸಂಚಗಾರ ಪತ್ರಕ್ಕೆ ನಾನು ಎರಡನೇ ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ಮೃತ ರವಿ ಇವರ ಸಹಿ ಎಷ್ಟನೇಯದು ಎಂದು ನೆನಪಿಲ್ಲ. ವ್ಯವಹಾರದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.